ಅಹಿಂಸಾಮಾರ್ಗದಲ್ಲಿ ಹೋರಾಟ ನಡೆಸಲು ತೀರ್ಮಾನಿಸಿದವು. ಮುಖ್ಯಮಂತ್ರಿಗಳಿಂದ ಆಶ್ವಾಸನೆ ಸಿಕ್ಕಿದ್ದರೂ ಉಚ್ಚನ್ಯಾಯಾಲಯದ ಸಹಕಾರವೂ ಸರಕಾರಕ್ಕೆ ಸಿಗಲಿ, ಸರಕಾರದ ಕೈಬಲಪಡಿಸಲಿ ಎಂದು ಉಚ್ಚನ್ಯಾಯಾಲಯದಲ್ಲಿಯೂ ಅಹವಾಲು ಸಲ್ಲಿಸಲು ವಿಧಾನ ಸಭೆಯಲ್ಲಿ ತೀರ್ಮಾನ ಮಾಡಿದವು. ಆಮೇಲೆ ಶಾಂತಿ ಸಂದೇಶ ಹೊತ್ತು ಪಾರಿವಾಳದೊಂದಿಗೆ ಲಾಯರ್ ಗಜರಾಯರು ಉಚ್ಚನ್ಯಾಯಾಲಯಕ್ಕೆ ಹೋದರು. ನ್ಯಾಯಾಧೀಶರ ಎದುರು ಕಾಡು ನಾಶವಾಗಿರುವುದನ್ನೂ, ಆಹಾರ ನೀರಿಲ್ಲದ ತಮ್ಮ ಪರಿಸ್ಥಿತಿಯನ್ನೂ ಎಳೆಎಳೆಯಾಗಿ ಬಿಚ್ಚಿಟ್ಟರು.

'ನಮಗೆ ನ್ಯಾಯಬೇಕು. ಕಾಡಿನಲ್ಲಿ ನಮಗೆ ಆಹಾರ, ನೀರು, ರಕ್ಷಣೆ ಇದ್ದರೆ ನಾವು ನಾಡಿಗೆ ಬರುತ್ತಿರಲಿಲ್ಲ. ಅಲ್ಲಿ ತೊಂದರೆಗೊಳಗಾದ ಕಾರಣ ನಮ್ಮವರು ನಾಡಿನತ್ತ ವಲಸೆ ಬರುತ್ತಿದ್ದಾರೆ. ಇಲ್ಲಿಯೂ ನಮ್ಮನ್ನು ಕೊಲ್ಲಲಾಗುತ್ತದೆ. ಹಾಗಾದರೆ ನಮಗೆ ಬದುಕುವ ಹಕ್ಕು ಇಲ್ಲವೆ? ನಾವೆಲ್ಲ ಸತ್ತು ಹೋದರೆ ನೀವೂ ಬದುಕಲು ಸಾಧ್ಯವುಂಟೆ? ನಾಡು ಕಾಡು ನೀರಸವಾಗುವುದಿಲ್ಲವೆ? ಸೃಷ್ಟಿಯಲ್ಲಿ ಹುಟ್ಟಿಸಿದಾತನು ಎಲ್ಲರಿಗೂ ಬದಕಲು ಅವಕಾಶ ಕೊಟ್ಟಿದ್ದಾನಲ್ಲವೆ? ಅದನ್ನು ಕಸಿಯುವುದು ತರವೆ?' ಎಂದು ವಾದ ಮಂಡಿಸಿದವು.

ಎಲ್ಲವನ್ನೂ ಸಾವಧಾನದಿಂದ ಆಲಿಸಿದ ನ್ಯಾಯಮೂರ್ತಿಗಳು ಕೊನೆಯಲ್ಲಿ ತೀರ್ಪು ಬರೆದರು ಪ್ರಾಣಿ ಪಕ್ಷಿಗಳು ಹಾಗೂ ಪ್ರತಿಯೊಂದು ಜೀವಿಯೂ ಬದುಕಿದರೇನೆ ಪ್ರಪಂಚಪರಿಸರ. ಪರಿಸರ ಇಲ್ಲದೆ ಮನುಷ್ಯರು ಇರಲು ಸಾಧ್ಯವಿಲ್ಲ. ಅದರ ರಕ್ಷಣೆ ನಮ್ಮ ಜವಾಬ್ದಾರಿ. ಪ್ರಾಣಿಗಳನ್ನು ಕೊಂದರೆ ಘೋರಶಿಕ್ಷೆ. ಪ್ರಾಣಿ ಪಕ್ಷಿಗಳಿಗೂ ಬೆಳೆದ ಕಾಳಿನ ಒಂದಿಷ್ಟು ಭಾಗವನ್ನು ಹೊಲದಲ್ಲಿ ಬಿಡುವುದು ಒಳಿತು. ಕಾಡಿನ ನಾಶ ಮಾಡದೇ, ಕಾಡಿನಲ್ಲಿಯೂ ಕೆರೆ ತೆಗೆಸಿ ನಿರು ತುಂಬುವಂತೆ ನೋಡಿಕೊಳ್ಳಬೇಕು. ಹೊಳೆ ಹಳ್ಳ ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕು., ಕಾಡಿನ ರಕ್ಷಣೆ ಮಾಡಬೇಕು. ಕಾಡು ಕಡಿಯಲು, ಬೇಟೆಯಾಡಲು ಕಾಡಿಗೆ ಹೋಗಬಾರದು.. ಪ್ರಾಣಿ ಪಕ್ಷಿಗಳಿಗೆ ಎಲ್ಲ ತರಹದ ರಕ್ಷಣೆ ಒದಗಿಸಬೇಕು ಎಂದು ಬರೆದ ತೀರ್ಪು ಓದಲಾಯಿತು.

ಪ್ರಾಣಿ ಪಕ್ಷಿಗಳಿಗೆ ಸಮಾಧಾನವಾಯಿತು. ಅವು ಕಾಡಿಗೆ ಮರಳಿ ಪ್ರಯಾಣ ಬೆಳೆಸಿದವು.

ಕಾಡಿನ ಪರಿಸರ ಚೆನ್ನಾಗಿದ್ದರೆ
ನಾಡಿಗೆ ನೆಮ್ಮದಿ ತ್ರಾಣ.
ಪ್ರಾಣಿ ಪಕ್ಷಿ ಜೀವಿಗಳೆಲ್ಲಕೂ
ಭೂಮಿಯೆ ಬದುಕುವ ತಾಣ.

ವನರಾಗ ಶರ್ಮಾ

ಶಾಲೆಯ ಆಟ

ಪ್ರಾಣಿಗಳೆಲ್ಲ ಸೇರಿದವು
ಶಾಲೆಯ ಆಟವ ಆಡಿದವು
ನಾನೇ ಹೆಡ್ಡು ಎಂದಿತು ಆನೆ
ಆಗದು ಎಂದಿತು ಕಾಡಿನ ರಾಜ

ಕನ್ನಡ ಕಲಿಸುವೆ ಎಂದಿತು ಕರಡಿ
ಕೂಡಲೇ ಗುಡುಗಿದ ಹುಲಿರಾಯ
ಕಾಡಿಗೆ ಹರಡುವೆ ಕನ್ನಡ ಕಂಪನು
ನಾನೇ ಬರೆಸುವೆ ಅ ಆ ಇ ಈ

ಗಣಿತ ಒಂದು ಕಬ್ಬಿಣ ಕಡಲೆ
ಬೇಡ ನನಗೆ ಅಂಕಿಯ ರಗಳೆ
ಇಂಗ್ಲಿಷ್ ಪದ್ಯವ ಹೇಳಿ ಕೊಡುವೆ
ಬನ್ನಿರಿ ಎಂದಿತು ಕಾಡೆಮ್ಮೆ

ಸಮಾಜವೆಂದರೆ ಪ್ರಾಣವು ನನಗೆ
ಪಾಟಿ ಪುಸ್ತಕ ತೆಗೆಯಿರಿ ಹೊರಗೆ,
ಬೆತ್ತವ ತೋರಿಸಿ ಹೇಳಿತು ಕತ್ತೆ
ತಡ ಮಾಡಿದರೆ ಬೀಳುವುದು ಲತ್ತೆ

ಜ್ಞಾನದಿ ಕೂಡಿದ ವಿಜ್ಞಾನ ನನಗೆ
ಎಲ್ಲರೂ ಬನ್ನಿರಿ ನನ್ನಯ ಕಡೆಗೆ
ಬರೆಯಿತು ಚಿರತೆ ಹಲಗೆಯ ಮೇಲೆ
ಕಾಮನ ಬಿಲ್ಲಲಿ ಬಣ್ಣಗಳೇಳು

ಬಾನಲಿ ಮಿಂಚು, ಗುಡುಗುಗಾಳಿ
ರಪ ರಪ ಮಳೆಯು ಸುರಿಯಲು ತೊಡಗಿ
ಮೊಲವು ಗಂಟೆಯ ಬಾರಿಸಲು
ಎಲ್ಲವೂ ಮನೆ ಕಡೆ ಓಡಿದವು

ಗೌರಿ ಚಂದ್ರಕೇಸರಿ

ನಿಮಗೆಷ್ಟು ಗೊತ್ತು

1. ಕಪ್ಪು ಹುಡಗನಿಗೆ ಬಿಳಿ ಮುಂಡಾಸು
2. ಗುದ್ದ್ಯಾಗಿನ ಗುದ್ದಪ್ಪ ಬಗ್ಗಿ ಬಗ್ಗಿ ನೋಡ್ತಾನೆ.
3. ಬಿಳಿ ಕುದ್ರೆ ಬೇಲಿ ಹಾರುತ್ತೆ.
4. ಕಪ್ಪು ಅವ್ವನಿಗೆ ಬಿಳಿ ಮಗ
5. ಒಂಟಿ ಕಾಲವ್ವನಿಗೆ ಒಂದೇ ಕಣ್ಣು
6. ತುಂಡು ಗೋಡೆ ಮೇಲೆ ಚಂದ್ರ ಕುಂತಾನೆ
7. ಗುಡ್ಡದ ಹಿಂದೆ ಗುಂಡ್ಕಲ್ಲು
8. ಕಪ್ಪು ಕಂಬದ ಮ್ಯಾಲೆ ಲಿಂಗಪ್ಪ ಕುಂತಾನೆ.
9 ಅರ್ಧ ರೊಟ್ಟಿ ಅವರೆ ಕಾಳು ಪಲ್ಯೆ
10 ಅವ್ವನ ಮನಿಗೆ ಮಗಳು ಹೋಗ್ತಾಳೆ. ಮಗಳ ಮನೆಗೆ ಅವ್ವ ಹೋಗಲ್ಲ
11 ಚಿಕ್ ಮನೆಯಲ್ಲಿ ಚಕ್ಕೆ ತುಂಬ್ಯಾರೆ

ಒಗಟು ಬಿಡಿಸಿ

12. ಬೆಳ್ಳಿ ಕುಡಿ ನೆಲಕ್ಕೆ ಹೊಡಿ
13. ದಾರಿಲಿ ಹೋಗೋ ಅಜ್ಜಿ ಸುಮ್ನೆ ಹಾಡ್ತಾಳೆ.
14. ನಾನೆಟ್ಟ ಮರ ನನಗೇ ಹತ್ತಕ್ಕೆ ಬರೊಲ್ಲ
15. ಬಡವರ ಅಂಗಳದಲ್ಲಿ, ಶ್ರೀಮಂತರ ಜೇಬಲ್ಲಿ

(ಸಂಗ್ರಹ) ಸೋಮ ಮಂಡಘಟ್ಟ

ಉತ್ತರಗಳು: 1.ಬಸಿಗೆ, 2. ಬೆಂಕಿ ಉರಿ, 3. ಬಾಳೆ, 4.ಹಿಂಗಸು, 5.ಹೂಕೆ, 6.ಹೂಗಾಯಿ, 7.ಕುಂಬಾಬು, 8.ಬಾಂಗಿ, 9.ಬಂಗಿ ಬಣ್ಣ, 10. ಬಂಗಾ ಹಂಗಿ, 11.ಬಂಕ ಕ್ಯಾಳಿಗೆ, 12.ಹಂಬಿಗೆ, 13.ದಾರಿದ ಗಂಡು, 14.ಬಾಳೆಹಣ್ಣು, 15 ಹಂಬಿಗೆ